ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:          ದಿನಾಂಕ : DATE :

## ಮಾತು ನಿಲ್ಲಿಸಿ, ಬೇಕಿದ್ರೆ ವರಿಷ್ಠರಿಗೆ ದೂರು ನೀಡಿ

# ಬ್ಲ್ಯಾಕ್‌ಮೇಲ್‌ಗೆ ಬಗ್ಗಲ್ಲ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಸಚಿವ ಸ್ಥಾನ ಸಿಗದವರು ಅಲ್ಲಲ್ಲಿ ಆರೋಪ ಮಾಡುವುದನ್ನು ನಿಲ್ಲಿಸಿ. ಬೇಕಿದ್ದರೆ ದೆಹಲಿಗೆ ಹೋಗಿ ವರಿಷ್ಠರಿಗೆ ದೂರು ಸಲ್ಲಿಸಿ. ನಿಮ್ಮನ್ನು ಯಾರೂ ತಡೆಯುವುದಿಲ್ಲ. ಯಾವುದೇ ಬೆದರಿಕೆಗೆ ಬಗ್ಗುವುದಿಲ್ಲ. ಬ್ಲ್ಯಾಕ್‌ಮೇಲ್ ತಂತ್ರಕ್ಕೂ ಮಣಿಯುವುದಿಲ್ಲ'- ಇದು ಸಚಿವ ಸ್ಥಾನ ವಂಚಿತ ಅತೃಪ್ತ ಶಾಸಕರಿಗೆ ಸಿಎಂ ಬಿ.ಎಸ್. ಯಡಿಯೂರಪ್ಪ ನೀಡಿರುವ ತಿರುಗೇಟು.

**ಅತೃಪ್ತರಿಗೆ ಬಿಎಸ್‌ವೈ ತಿರುಗೇಟು**

ಹೊಸ ನೂತನ ಸಚಿವರು ಪ್ರಮಾಣವಚನ ಸ್ವೀಕರಿಸಿ 24 ತಾಸು ಕಳೆದರೂ ಆರೋಪ, ಟೀಕೆ-ಟಿಪ್ಪಣಿ ಮುಂದುವರಿಸಿರುವ ಅತೃಪ್ತರ ನಡೆಯಿಂದ ಅಸಮಾಧಾನಗೊಂಡಿರುವ ಯಡಿಯೂರಪ್ಪ ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತ ಆಕ್ರೋಶ ಹೊರಹಾಕಿದರು. 'ನಾನು ಯಾರನ್ನೂ ಕಡೆಗಣಿಸಿಲ್ಲ. ಇತಿಮಿತಿಯೊಳಗೆ ಸಚಿವ ಸಂಪುಟ ವಿಸ್ತರಣೆಯಾಗಿದೆ. ಸಚಿವ ಸ್ಥಾನ ಸಿಕ್ಕಿಲ್ಲವೆಂದು ಹಾದಿಬೀದಿಯಲ್ಲಿ ನಿಂತು ಮಾತನಾಡುವುದು ಸರಿಯಲ್ಲ. ನಿಮ್ಮಲ್ಲಿರುವುದು ಅತೃಪ್ತಿಯೋ ಅಥವಾ ಅಸಮಾಧಾನವೋ ಗೊತ್ತಿಲ್ಲ. ಮನಸ್ಸಿಗೆ ಬಂದಂತೆ ಆರೋಪ, ಹೇಳಿಕೆ ನೀಡಿ ಪಕ್ಷದ ಶಿಸ್ತು, ವರ್ಚಸ್ಸಿಗೆ ಧಕ್ಕೆ ತರಬಾರದು. ಏನಾದರೂ ದೂರುಗಳಿದ್ದರೆ ವರಿಷ್ಠರಿಗೆ ಸಲ್ಲಿಸಿ, ಅವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ' ಎಂದು ಸಿಎಂ ಸವಾಲಿನ ಧ್ವನಿಯಲ್ಲಿ ಹೇಳಿದರು.



**ಆಶೀರ್ವಾದ ಇದೆ**

'ಅವೇನು ಸಿಡಿ, ಮತ್ತೇನಿದೆಯೋ ಅದನ್ನೂ ವರಿಷ್ಠರಿಗೆ ಕೊಡಿ. ಯಾವುದೇ ಬೆದರಿಕೆಗೆ ಬಗ್ಗುವುದಿಲ್ಲ. ಹಾದಿಬೀದಿಯಲ್ಲಿ ನಿಂತು ಮಾತನಾಡಿದರೆ ಕೆಲವರು ಸಚಿವ ಸ್ಥಾನ ಸಿಗುತ್ತದೆ ಅಂದು ಕೊಂಡಿದ್ದಾರೆ. ಅಂತಹದ್ದು ಏನೂ ನಡೆಯುವುದಿಲ್ಲ' ಎಂದು ಬಿಎಸ್‌ವೈ ತಿರುಗೇಟು ನೀಡಿದರು. ಸಚಿವ ಸ್ಥಾನ ಸಿಗದ ಶಾಸಕರು ದೆಹಲಿಗೆ ಹೋಗಿ ದೂರು ನೀಡಿದರೆ ಸರಿ-ತಪ್ಪನ್ನು ವರಿಷ್ಠರೇ ನಿರ್ಧರಿಸುತ್ತಾರೆ ಎಂದರು. ›ಪುಟ 4

## 18ಕ್ಕೆ ಹೊಸಬರಿಗೆ ಖಾತೆ ಹಂಚಿಕೆ

...ಪುಟ-6...

## ಬ್ಲ್ಯಾಕ್‌ಮೇಲ್‌ಗೆ ಬಗ್ಗಲ್ಲ

ಮೊದಲನೇ ಪುಟದಿಂದ...

ಕೇಂದ್ರ ನಾಯಕರ ಆಶೀರ್ವಾದ ನನ್ನ ಮೇಲಿದ್ದು, ಯಾರೂ ಏನನ್ನೂ ಮಾಡಿಕೊಳ್ಳಲಾಗದು. ಬಸನಗೌಡ ಪಾಟೀಲ್ ಅಂತಹವರು ಎಲ್ಲ ಪಕ್ಷಗಳಲ್ಲೂ ಇರುತ್ತಾರೆ. ಅವರು ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಅವರು ಕಟ್ಟಿ ಸುರಿದಂತೆ ಹೇಳಿದರು.



**ಪುರುಸೊತ್ತಿಲ್ಲ:** ಅತ್ತ ದಾವಣಗೆರೆಯಲ್ಲೂ ಇದೇ ವಿಷಯ ಪ್ರಸ್ತಾಪಿಸಿದ ಸಿಎಂ ಬಿಎಸ್‌ವೈ, ಅಭಿವೃದ್ಧಿ ಕುರಿತು ಚಿಂತಿಸುತ್ತಿರುವ ತಮಗೆ ಆರೋಪಗಳ ಬಗ್ಗೆ ತಲೆ ಕೆಡಿಸಿಕೊಳ್ಳುವಷ್ಟು ಪುರುಸೊತ್ತಿಲ್ಲ ಎಂದರು.

'ನನ್ನ ಇತಿಮಿತಿಯಲ್ಲಿ ಸಾಧ್ಯವಾದ ಮಟ್ಟಿಗೆ ಮಂತ್ರಿಮಂಡಲ ವಿಸ್ತರಣೆ ಮಾಡಿದ್ದೇನೆ. ಪಕ್ಷದ ವರಿಷ್ಠರ ಅಪೇಕ್ಷೆಯಂತೆ ಒಂದು ಸ್ಥಾನ ಖಾಲಿ ಉಳಿಸಿಕೊಂಡಿದ್ದೇನೆ. ಯಾರು ಏನೇ ಹೇಳಿದರೂ ಕೇಂದ್ರ ನಾಯಕರು ಹೇಳಿದಂತೆ ಇನ್ನುಳಿದ ಎರಡೂವರೆ ವರ್ಷದ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ ವಿಶೇಷ ಗಮನ ಕೊಡುವೆ. ಅದನ್ನು ಯಾರೂ ತಡೆಯಲು ಸಾಧ್ಯವಿಲ್ಲ' ಎಂದರು. ಈ ತಿಂಗಳ ಅಂತ್ಯಕ್ಕೆ ವಿಧಾನ ಮಂಡಲದ ಅಧಿವೇಶನ ಆರಂಭವಾಗಲಿದೆ. ಮಾರ್ಚ್‌ನಲ್ಲಿ ಬಜೆಟ್ ಅಧಿವೇಶನ ನಡೆಸಲಿದ್ದೇನೆ. ಹಣಕಾಸಿನ ಇತಿಮಿತಿಯಲ್ಲಿ ರೈತಪರವಾದ ಒಳ್ಳೆಯ ಬಜೆಟ್ ಕೊಡಲು ಪ್ರಯತ್ನ ಮಾಡುವೆ ಎಂದು ಹೇಳಿದರು.